ಈ) ಬ್ಯಾರೇಜುಗಳ ಅಡಿಪಾಯದ ಅಗೆತದ ಕಾಮಗಾರಿಗಳು ಪೂರ್ಣಗೊಂಡಿದ್ದು, ಅಡಿಪಾಯ ಕಾಂಕ್ರಿಟ್ ಕೆಲಸ ಪ್ರಗತಿಯಲ್ಲಿದೆ.

ಉ) ಕಾಮಗಾರಿಗಳು ಯೋಜನೆಯಾನುಸಾರ ಪ್ರಗತಿಯಲ್ಲಿದ್ದು, ಮಂದಗತಿಯಲ್ಲಿ ಸಾಗುತ್ತಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಬ್ಯಾರೇಜ್ ಕಾಮಗಾರಿಗಳಿಗೆ ಅವಶ್ಯಕ ಅನುದಾನ ಒದಗಿಸಿ ಕಾಮಗಾರಿಗಳನ್ನು ನಿಗಧಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1623 (2113) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :–
ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಪ್ರಸ್ತುತ ವರ್ಷದಲ್ಲಿ ಪಂಚಾಯಿತಿವಾರು ಬಿಡುಗಡೆ ಮಾಡಿರುವ ಮನೆಗಳು ಎಷ್ಟು;

2) ರಾಜ್ಯದಲ್ಲಿ ಪಟ್ಟಣ ಪ್ರದೇಶಗಳನ್ನು ಹೊರತುಪಡಿಸಿ ಗ್ರಾಮೀಣ ಭಾಗದಲ್ಲಿರುವ ವಸತಿಹೀನರ ಜನಗಣತಿಯಾಗಿದಿಯೇ;

3) ಹಾಗಿದ್ದಲ್ಲಿ, ವಸತಿ ಹೀನರ ಒಟ್ಟು ಸಂಖ್ಯೆ ಎಷ್ಟು;

4) ರಾಜ್ಯದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಪ್ರಸಕ್ತ ವರ್ಷದಲ್ಲಿ ಮಂಜೂರಾದ ಮನೆಗಳು ಎಷ್ಟು;

5) ರಾಜ್ಯದಲ್ಲಿರುವ ವಸತಿ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸಲು ಬೇಕಾಗಿರುವ ಸಮಯವೆಷ್ಟು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

1) 2006–07ನೇ ಸಾಲಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿಗೆ 60 ಹಾಗೂ 2001ರ ಜನಗಣತಿಯ ಪ್ರಕಾರ 10000 ಜನಸಂಖ್ಯೆಯನ್ನು ಮೀರಿದ ಗ್ರಾಮಪಂಚಾಯಿತಿಗಳಿಗೆ ಹೆಚ್ಚುವರಿಯಾಗಿ 60 ಮನೆಗಳ ಗುರಿಯನ್ನು ನೀಡಲಾಗಿದೆ.

ಇಂದಿರಾ ಆವಾಸ್ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗಳಿಗೆ 30 ರಂತೆ ಒಟ್ಟು 1748 ಗ್ರಾಮ ಪಂಚಾಯಿತಿಗಳಿಗೆ 53299 ಮನೆಗಳ ಗುರಿಯನ್ನು ನೀಡಲಾಗಿದೆ.

2) ಗ್ರಾಮೀಣ ಭಾಗದಲ್ಲಿರುವ ವಸತಿಹೀನರ ಸಮೀಕ್ಷೆಯನ್ನು 2003ರ ಜೂನ್ ಮಾಹೆಯಲ್ಲಿ ನಡೆಸಲಾಗಿದೆ.

3) ಒಟ್ಟು ರಾಜ್ಯದಲ್ಲಿ **1226345** ವಸತಿ ಹೀನರು **1042986** ನಿವೇಶನ ರಹಿತರು ಲಭ್ಯವಿರುತ್ತಾರೆ.

4) ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ಯೋಜನೆಗಳಡಿ ಮನೆಗಳು ಮಂಜೂರಾಗಿರುತ್ತವೆ.

ಸಂಖ್ಯೆ	ಯೋಜನೆಗಳು	ಗುರಿ
1.	ಗ್ರಾಮೀಣ ಆಶ್ರಯ	340560
2.	ಇಂದಿರಾ ಆವಾಸ್	53299

5) ಈ ವಸತಿ ಸಮಸ್ಯೆಯನ್ನು ಮುಂದಿನ ವರ್ಷಗಳಲ್ಲಿ ಸರ್ಕಾರವು ಗುರಿ ಮತ್ತು ಹಣಕಾಸಿನ ಕಡೆಗೆ ಹೆಚ್ಚಿನ ಆದ್ಯತೆ ನೀಡಿ ನಿವಾರಿಸಲಾಗುವುದು.

1624 (2312) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

01) ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಹಾಗೂ ಅನುದಾನಿತ ಶಾಲಾ ಶಿಕ್ಷಕರಿಗೆ ರೂ.200–00 ವಿಶೇಷ ಭತ್ಯೆಯನ್ನು ನೀಡುತ್ತಿರುವುದು ನಿಜವೇ;

02) ನಿಜವಾದಲ್ಲಿ, ಯಾವಾಗಿನಿಂದ ನೀಡಲಾಗುವುದು;

03) ಹಾಗಿದ್ದಲ್ಲಿ, ಶಿಕ್ಷಕೇತರ ಸಿಬ್ಬಂದಿಗಳಿಗೆ ಈ ಸೌಲಭ್ಯ ನೀಡದಿರಲು ಕಾರಣಗಳೇನು;

04) ಈ ಕುರಿತು ಸರ್ಕಾರ ತಾರತಮ್ಯ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಲಾಗುವುದು [ವಿವರ ನೀಡುವುದು]?